# ದೈವೀಶಕ್ತಿ



❁ ಭಗವಂತನಿಗೆ ಯಾವುದೂ ಅಸಾಧ್ಯವಲ್ಲ. ಅವನ ಸ್ವರೂಪ ಏನೆಂಬುದನ್ನು ಯಾರಿಂದಲೂ ಬಾಯಿಂದ ವರ್ಣಿಸಲಾಗುವುದಿಲ್ಲ. ಭಗವಂತನ ಕೈಯಲ್ಲಿ ಎಲ್ಲವೂ ಸಾಧ್ಯ. ಒಂದು ಕಡೆ ಇಬ್ಬರು ಯೋಗಿಗಳು ಸಾಧನೆಯಲ್ಲಿ ತೊಡಗಿದ್ದರು. ನಾರದ ಋಷಿ ಆ ಮಾರ್ಗವಾಗಿ ಒಂದು ದಿನ ಮುಂದುವರಿಯುತ್ತಿದ್ದರು. ಒಬ್ಬ ಯೋಗಿ ನಾರದರ ಪರಿಚಯ ಮಾಡಿಕೊಂಡು ಅವರನ್ನು ಕೇಳಿದ: 'ನೀವು ನಾರಾಯಣನ ಸಾನ್ನಿಧ್ಯದಿಂದ ಬರುತ್ತಾ ಇದ್ದೀರಲ್ಲವೆ? ಆತ ಏನು ಮಾಡುತ್ತಾ ಇದ್ದಾನೆ?' ನಾರದರು ಹೇಳಿದರು: 'ಈಗ ತಾನೆ ನೋಡಿಕೊಂಡು ಬಂದೆ. ಆತ ಸೂಜಿಯ ಕಣ್ಣಿನ ಮೂಲಕ ಆನೆ ಮತ್ತು ಒಂಟೆಗಳನ್ನು ಈ ಕಡೆಯಿಂದ ಆ ಕಡೆಗೆ, ಆ ಕಡೆಯಿಂದ ಈ ಕಡೆಗೆ ಹುಗಿಸುತ್ತಾ ಇರುವುದನ್ನು.' ಅವರಲ್ಲಿ ಒಬ್ಬ ಹೇಳಿದ: 'ಅದರಲ್ಲಿ ಆಶ್ಚರ್ಯ ಪಡುವುದೇನಿದೆ? ಆತನಿಗೆ ಎಲ್ಲವೂ ಸಾಧ್ಯ.' ಆದರೆ ಇನ್ನೊಬ್ಬ ವಿಸ್ಮಯದಿಂದ ಕೇಳಿದ: 'ಏನು! ಅದು ಎಂದಿಗಾದರೂ ಸಾಧ್ಯವೆ? ನೀವು ಅಲ್ಲಿಗೆ ಹೋಗಲೇ ಇಲ್ಲ ಅಂತ ಕಾಣುತ್ತದೆ!'

❁ ಆದ್ಯಾಶಕ್ತಿಯ ಸಹಾಯದಿಂದಲೇ ಭಗವಂತನ ಅವತಾರ ಲೀಲೆ. ಭಗವಂತ ತನ್ನ ಈ ಶಕ್ತಿಯಿಂದ ಮನುಷ್ಯನಾಗಿ ಅವತರಿಸುತ್ತಾನೆ. ಆಗ ಮಾತ್ರವೇ ಅವತಾರಪುರುಷನಿಗೆ ಕೆಲಸ ಮಾಡಲು ಸಾಧ್ಯವಾಗುತ್ತದೆ. ಎಲ್ಲವೂ ಭಗವತಿಯ ಶಕ್ತಿಯಿಂದಲೇ ಘಟಿಸುತ್ತವೆ.

❁ ಕೆಲವು ವೇಳೆ ಭಗವಂತ ಚುಂಬಕ, ಭಕ್ತ ಸೂಜಿ ಆಗುತ್ತಾರೆ. ಭಗವಂತ ಭಕ್ತನನ್ನು ಆಕರ್ಷಿಸಿಬಿಡುತ್ತಾನೆ. ಇನ್ನು ಕೆಲವು ವೇಳೆ ಭಕ್ತ ಚುಂಬಕ, ಭಗವಂತ ಸೂಜಿ ಆಗಿಬಿಡುತ್ತಾನೆ. ಭಕ್ತನ ಆಕರ್ಷಣೆ ಅಷ್ಟು ಬಲವಾದದ್ದು, ಆತನ ಪ್ರೇಮಕ್ಕೆ ಮುಗ್ಧನಾಗಿ ಭಗವಂತ ಆತನ ಹತ್ತಿರಕ್ಕೆ ಹಾರಿಬರುತ್ತಾನೆ.

❁ ಭಗವಂತನ ಸೃಷ್ಟಿಯಲ್ಲಿ ಎಲ್ಲವೂ ಸಾಧ್ಯ ಎಂಬ ಶ್ರದ್ಧೆಯೊಂದಿದ್ದರೆ ಬೇಕಾದಷ್ಟು. ನಿನ್ನ ಭಾವನೆಗಳೇ ಸತ್ಯವಾದುವು, ಉಳಿದವರದೆಲ್ಲಾ ಅಸತ್ಯವಾದುವು ಎಂಬ ಭಾವನೆ ನಿನ್ನ ಮನಸ್ಸಿನ ಹೊಸ್ತಿಲನ್ನೇ ಹತ್ತದಿರಲಿ. ಬಳಿಕ ಆತನೇ ಎಲ್ಲವನ್ನೂ ತಿಳಿಸಿಕೊಡುತ್ತಾನೆ.

❁ ಭಗವಂತನ ಕೆಲಸಕಾರ್ಯಗಳನ್ನು ಮನುಷ್ಯ ಅರಿಯುವ ಬಗೆ ಹೇಗೆ? ಅವಕ್ಕೆ ಮಿತಿ ಎಂಬುದೇ ಇಲ್ಲ. ಆದ್ದರಿಂದ ಇದನ್ನು ನಾನು ಅರಿತುಕೊಳ್ಳಲು ಸ್ವಲ್ಪವೂ ಪ್ರಯತ್ನ ಮಾಡುವುದಿಲ್ಲ. ಆತನ ಸೃಷ್ಟಿಯಲ್ಲಿ ಎಲ್ಲವೂ ಸಾಧ್ಯ ಎಂಬುದನ್ನು ಕೇಳಿ, ಅದನ್ನು ಹೃದಯದಲ್ಲಿ ಚಿರಮುದ್ರಿತವನ್ನಾಗಿ ಮಾಡಿಕೊಂಡಿದ್ದೇನೆ. ಆದ್ದರಿಂದ ನಾನು ಆತನ ಸೃಷ್ಟಿಯ ಸಂಬಂಧವಾಗಿ ಒಂದು ಸ್ವಲ್ಪವೂ ಚಿಂತಿಸದೆ, ಆತನ ಸಂಬಂಧವಾಗಿಯೇ ಚಿಂತಿಸುತ್ತಿದ್ದೇನೆ. ಒಮ್ಮೆ ಹನುಮಂತನಿಗೆ ಯಾರೋ ಪ್ರಶ್ನೆ ಹಾಕಿದರು: 'ಈ ದಿನ ಯಾವ ತಿಥಿ?' ಎಂಬುದಾಗಿ. ಆತ ಹೇಳಿದ: 'ನನಗೆ ತಿಥಿ, ವಾರ, ನಕ್ಷತ್ರ ಯಾವುದೂ ಗೊತ್ತಿಲ್ಲ; ನಾನು ಕೇವಲ ರಾಮ ಚಿಂತನೆಯನ್ನು ಮಾತ್ರ ಮಾಡುತ್ತಿದ್ದೇನೆ.'

❁ ಭಗವಂತನ ಚೇತನದಿಂದ ಈ ಜಗತ್ತು ಚೇತನಮಯವಾಗಿದೆ. ಒಮ್ಮೊಮ್ಮೆ ಕಾಣಬರುತ್ತದೆ, ಚಿಕ್ಕಪುಟ್ಟ ಮೀನುಗಳಲ್ಲೂ ಅದೇ ಚೇತನ 'ಕಿಲ ಕಿಲ' ಅನ್ನುತ್ತಿರುವುದು.

❁ ಎಲ್ಲಿಯವರೆಗೆ ಉಪಾಧಿಯಿರುವುದೋ, ಅಲ್ಲಿಯವರೆಗೆ ನಾನಾತ್ವದ ಬೋಧೆ ಇರುತ್ತದೆ — ಕೇಶವ, ಪ್ರಸನ್ನ, ಅಮೃತ ಇತ್ಯಾದಿಗಳ ಬೋಧೆ. ಪೂರ್ಣಜ್ಞಾನ ದೊರೆತಾಗ ಎಲ್ಲೆಲ್ಲೂ ಒಂದೇ ಚೈತನ್ಯವಿರುವ ಹಾಗೆ ಬೋಧೆಯಾಗುತ್ತದೆ. ಆ ಪೂರ್ಣಜ್ಞಾನವೇ ಮತ್ತೆ ಅನುಭವವನ್ನು ತರುತ್ತದೆ, ಆ ಒಂದು ಚೈತನ್ಯ ವಸ್ತುವೇ ಈ ಜೀವ, ಜಗತ್ತು, ಈ ಚತುರ್ವಿಂಶತಿ ತತ್ತ್ವ ಆಗಿದೆ ಎಂಬುದಾಗಿ. ಶಕ್ತಿವಿಶೇಷತೆಯಿಂದ, ಅದೇ ಎಲ್ಲವೂ ಆಗಿರುವುದೇನೋ ನಿಜ; ಆದರೆ ಕೆಲವದರಲ್ಲಿ ಶಕ್ತಿಯ ಪ್ರಕಾಶ ಹೆಚ್ಚು, ಇನ್ನು ಕೆಲವದರಲ್ಲಿ ಕಡಿಮೆ.

❁ ಭಗವಂತ ಯಾರ ಮೂಲಕ ವಿಶೇಷವಾಗಿ ಕ್ರೀಡಿಸುತ್ತಾನೋ, ಆತನಲ್ಲಿ ಭಗವಂತನ ಶಕ್ತಿ ವಿಶೇಷರೂಪದಲ್ಲಿ ಇರುತ್ತದೆ. ಜಮೀನುದಾರ ತನ್ನ ಎಸ್ಟೇಟಿನಲ್ಲಿ ಎಲ್ಲಿ ಬೇಕಾದರೂ ಇರಬಲ್ಲ. ಆದರೆ ಒಂದು ನಿರ್ದಿಷ್ಟ ಬೈಠಕ್‌ಖಾನೆಯಲ್ಲಿ ಆತ ಪ್ರಾಯಿಕವಾಗಿ ಇರುತ್ತಾನೆ. ಭಕ್ತ ಭಗವಂತನ ಬೈಠಕ್‌ಖಾನೆ, ಭಕ್ತನ ಹೃದಯದಲ್ಲಿ ಕ್ರೀಡಿಸಲು ಆತ ಇಚ್ಛಿಸುತ್ತಾನೆ. ಭಕ್ತನ ಹೃದಯದಲ್ಲಿ ಆತನ ವಿಶೇಷ ಶಕ್ತಿ ಬಂದು ನೆಲೆಸುತ್ತದೆ.

❁ ಯಾರು ಜೀವರಿಗಾಗಿ ಚಂದ್ರ, ಸೂರ್ಯ, ತಂದೆ-ತಾಯಿ, ಹೂವು, ಹಣ್ಣು, ಧಾನ್ಯ ಸೃಷ್ಟಿಸಿದ್ದಾನೋ, ಆ ಭಗವಂತನೇ ಪರರಿಗೆ ಉಪಕಾರ ಮಾಡಲು ಪರರಿಗೆ ಶ್ರೇಯಸ್ಸನ್ನು ತರಲು ಹಕ್ಕುದಾರ. ತಾಯಿ-ತಂದೆಯರಲ್ಲಿ ಕಾಣಬರುವ ಒಲುಮೆ ಅದು ಆತನಿಗೆ ಸೇರಿದುದೆ; ಜೀವರಕ್ಷಣೆಗಾಗಿಯೇ ಆತ ಅದನ್ನು ಅವರಿಗೆ ಕೊಟ್ಟಿದ್ದಾನೆ. ದಯಾಳುವಿನಲ್ಲಿ ಕಾಣಬರುವ ದಯೆ ಆತನದೇ; ನಿಸ್ಸಹಾಯಕ ಜೀವಿಗಳ ರಕ್ಷಣೆಗಾಗಿ ಅವರಿಗೆ ಅದನ್ನು ಕೊಟ್ಟಿದ್ದಾನೆ. ನೀನು ದಯೆ ತೋರು, ಬಿಡು; ಆತ ಒಂದಲ್ಲ ಒಂದು ವಿಧವಾಗಿ ತನ್ನ ಕೆಲಸವನ್ನು ಮಾಡಿಸಿಕೊಂಡು ಬಿಡುತ್ತಾನೆ.

ಶ್ರೀರಾಮಕೃಷ್ಣ ವಚನವೇದದಿಂದ